ಜಾಕೋಬ್ ಡಿಸೋಜ, ಕುರುವಳ್ಳಿ
*ಹೊಗೆ ಹಾಕಿಸಿಕೊಳ್ಳೋದು ಅಂತ ಯಾವುದಕ್ಕೆ ಕರೀತಾರೆ ಗುರು?*




ನರ್ಸಿಂಗ್‌ಹೋಂ ಬಿಲ್ ಕಂಡು ಉಸಿರು ಮರಳಿ ಬಾರದಂತೆ ಸಿಕ್ಕಿಹಾಕಿಕೊಂಡ ಸ್ಥಿತಿಗೆ!

ಹೆಚ್.ಎಂ. ಅನಂತಪದ್ಮನಾಭ, ಮೈಸೂರು
*ಸಾವು ಬರುವುದು ಬಹುಮಾನವೋ, ಶಿಕ್ಷೆಯೋ?*
ಸತ್ತವರಿಗೆ ಬಹುಮಾನ, ಆತ್ಮೀಯರಿಗೆ ಶಿಕ್ಷೆ.

ಎಂ.ಎ. ರುಕ್ಮಿಣಿ, ಗಾಂಡ್ಲಹಳ್ಳಿ
*ಜನಕರಾಜನು ನೆಲ ಉಳುವಾಗ ಸೀತೆ ನೆಲದಲ್ಲಿ ಸಿಕ್ಕಳು ಎಂದರೆ 'ಟ್ರಾಕ್ಟರ್ ತೊಗೊಳಕ್ಕೆ ಅವನ ಹತ್ತಿರ ದುಡ್ಡಿರಲಿಲ್ಲವೆ?' ಎನ್ನುವ ಮಕ್ಕಳಿಗೆ ರಾಮಾಯಣ ಹೇಳುವುದು ಹೇಗೆ?*
ನೆಲ ಉಳಲು ಆಳುಗಳನ್ನಿಟ್ಟುಕೊಳ್ಳಲೂ ದುಡ್ಡಿಲ್ಲದೆ ತಾನೇ ನೆಲ ಉಳುತ್ತಿದ್ದ ಎಂದ ಮೇಲೆ, ದುಡ್ಡಿರಲಿಲ್ಲ ಎಂದೇ ಹೇಳಬೇಕು!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಶಿವನಿಗೆ ಇದ್ದಹಾಗೆ ರಾಜಕೀಯ ನಾಯಕರಿಗೆ ಮೂರನೆಯ ಕಣ್ಣು ಇದ್ದಿದ್ದರೆ?*



ರೈಡ್ ಆಗುತ್ತದೆ ಎಂದು ತಿಳಿದಾಕ್ಷಣ ಅಕ್ರಮ ಹಣವನ್ನು ಸುಡಲು ಅನುಕೂಲವಾಗುತ್ತಿತ್ತು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಕಣ್ಣಾರೆ ನೋಡಿದೆ, ಕಿವಿಯಾರೆ ಕೇಳಿದೆ ಅಂತಾರಲ್ಲಾ, ಮತ್ತೇನು ಮಾಡಲು ಸಾಧ್ಯ?*
ನಾಲಿಗೆಯಿಂದ ರುಚಿ 'ನೋಡು'ತ್ತೇವೆ; ಬಾಯಿಂದ ಸಾಲ 'ಕೇಳು'ತ್ತೇವೆ. ಹೀಗಿರುವುದರಿಂದಲೇ ಕನ್ನಡ ಶ್ರೀಮಂತ ಭಾಷೆ!

ವಿ. ಹೇಮಂತಕುಮಾರ, ಬೆಂಗಳೂರು
*ಬೆಲ್ಲದ ಅಚ್ಚನ್ನು ಯಾವ ಕಡೆಯಿಂದ ಕಚ್ಚಿದರೂ ಸಿಹಿಯಾಗೇ ಇರುತ್ತೆ ಅಂತ ಹೇಳುತ್ತಿರುತ್ತಾರಲ್ಲಾ...?*
ಹಾಗೇನಿಲ್ಲ. ಬಹಳ ಗೊದ್ದಗಳು ತುಂಬಿರುವ ಕಡೆಯಿಂದ ಕಚ್ಚಿದರೆ ವಿಚಿತ್ರ ರುಚಿ ಇರುತ್ತದೆ!

ಬಸವನಗೌಡ ಹೆಚ್.ಸಿ. ಶಿವಮೊಗ್ಗ
*ಕುಡಿಯೋದು ಅಂದ್ರೆ ಎಲ್ಲಾ ಹೆಂಡ ಅಂತಾನೆ ಯಾಕೆ ತಿಳ್ಕೋತಾರೆ ಸಾರ್?*
ಮನದಾಳದಲ್ಲಿ ಎಲ್ಲರೂ ನಶೆಯ ದಿಶೆಯವರೇ ಆದ್ದರಿಂದ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಎಲ್ಲಾ ಅಂಗಗಳೂ ವೈಫಲ್ಯಗೊಂಡಿರುವಾಗ ನ್ಯಾಯಾಂಗ ಮಾತ್ರವೇ ಭರವಸೆ ಮೂಡಿಸುತ್ತಿದೆಯಲ್ಲವೆ?*
ನಿಜ. ಆದರೆ ಅದರ ವರಸೆಯ ಭರ ಸಾಲದು.

ವಿದ್ಯಾನಾಗ್, ಬೆಂಗಳೂರು
*ದೆವ್ವ ಇಲ್ಲ ಎಂದು ನಂಬುವವರು ದೇವರು ಇಲ್ಲ ಎಂದು ನಂಬುವುದಿಲ್ಲ; ಏಕೆ?*
ದೇವರು ಇಲ್ಲ ಎಂಬ ಪ್ರಸ್ತಾಪವೇ ಅವರಿಗೆ ದೆವ್ವವಾಗಿ ಕಾಡುವುದರಿಂದ!

ಎಂ.ಎನ್. ಸೋಮಶೇಖರ್, ಮೈಸೂರು
*ಸೋತು ಗೆಲ್ಲುವುದಕ್ಕೂ, ಗೆದ್ದು ಸೋಲುವುದಕ್ಕೂ ಏನು ವ್ಯತ್ಯಾಸ?*
ಪ್ರೀತಿಯಲ್ಲಿ ಸೋತು ಗೆಲ್ಲುತ್ತೇವೆ; ಯುದ್ಧದಲ್ಲಿ ಗೆದ್ದು ಸೋಲುತ್ತೇವೆ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಸಾವಿರಾರು ರೂಪಾಯಿ ಮೌಲ್ಯದ ವಾಚ್ ಕಟ್ಟಿದವರಿಗೂ ಸಮಯಪ್ರಜ್ಞೆ ಇರುವುದಿಲ್ಲವಲ್ಲ?*
ಪಾಪ! ವಾಚಿನ ಅಂದ ನೋಡುವುದರಲ್ಲೇ ಮೈಮರೆಯುವುದರಿಂದ ಸಮಯ ಕಳೆದುದೇ ತಿಳಿಯುವುದಿಲ್ಲವಂತೆ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ರಾಜಕಾರಣಿಗಳು ತಲೆ ತಗ್ಗಿಸಿ ನಡೆಯುವುದು ಯಾವಾಗ?*
ಸರ್ವಿಕಲ್ ಸ್ಪಾಂಡಿಲೈಟಿಸ್ ಆದಾಗ!

ಪದ್ಮ ಬಿ.ಎಂ. ಸಹಕಾರನಗರ
*ಗಂಡಸರು ಜೀವನದಲ್ಲಿ ಜಿಗುಪ್ಸೆಯಾದರೆ ಸನ್ಯಾಸಿಯಾಗುತ್ತೇನೆ ಎನ್ನುತ್ತಾರೆ. ಹೆಂಗಸರು?*
ತಲೆಯ ಮೇಲೆ ಮೊಟಕಿ 'ಮರ್ಯಾದೆಯಾಗಿ ಒಳಗೆ ಹೋಗಿ ಬಿದ್ದುಕೊಳ್ಳಿ' ಎನ್ನುತ್ತಾರೆ!

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ದೇವರು ಮಾನವನಿಗೆ ಕಣ್ಣು, ಕಿವಿ, ಕೈ, ಕಾಲು ಎರಡೆರಡು ನೀಡಿ ಬಾಯಿ ಒಂದೇ ಏಕೆ ನೀಡಿದ್ದಾನೆ?*
ಅಧ್ಯಯನ, ಶ್ರವಣ, ಕೆಲಸ ಹೆಚ್ಚಿರಲಿ; ಮಾತು ಕಡಿಮೆಯಿರಲಿ ಎಂಬ ಸದುದ್ದೇಶ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಮುಂದೆಂದಾದರೂ ಒಂದು ದಿನ ಭಾರತದಲ್ಲಿ ಹೆಣ್ಣನ್ನು ಗಲ್ಲಿಗೇರಿಸುವ ಪ್ರಮೇಯ ಬರಬಹುದೆ?*
ಈಗಲೇ ಇದೆಯಲ್ಲ! ಧನಪಿಶಾಚಿಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಡುವುದು ಇದೇ ಅಲ್ಲವೇ!

ಎಚ್.ಜಿ. ಜಗದೀಶ್, ಮೈಸೂರು
*ನಮ್ಮ ಪ್ರಶ್ನೆಗಳಿಗೆ ನಿಮ್ಮ ಬಳಿ ಉತ್ತರವಿದ್ದೂ, ನೀಡದಿದ್ದರೆ ನಿಮ್ಮ ತಲೆ ಸಾವಿರ ಹೋಳಾಗಬಹುದೆಂದು ನಿಮಗೆ ತಿಳಿದಿದೆಯೆ?*
ಅಷ್ಟೇ ಅಲ್ಲ, ತಲೆ ತಿನ್ನುವ ನಿಮ್ಮಂತಹವರು ಆ ಹೋಳುಗಳನ್ನು ಉಪ್ಪಿನಕಾಯಿ ಮಾಡಿಕೊಂಡು ಚಪ್ಪರಿಸುವರೆಂದೂ ಗೊತ್ತು!

ಎಸ್.ಜಿ. ಕರನಂದಿ, ಹುನಗುಂದ
*ಒಂಟಿ ಜೀವನಕ್ಕೂ, ಜಂಟಿ ಜೀವನಕ್ಕೂ ಇರುವ ವ್ಯತ್ಯಾಸವೇನು ಸಾರ್?*



ಜಂಟಿ ಜೀವನದಲ್ಲಿ ಎಲ್ಲಾ ತಪ್ಪುಗಳನ್ನೂ ಇನ್ನೊಬ್ಬರ ಮೇಲೆ ಹೊರಿಸಬಹುದು!

ಎನ್.ಎಸ್. ಆನಂದ್, ಬೆಂಗಳೂರು
*ಪೋಲಿಯೋದಿಂದ ಮುಕ್ತವಾದರೂ ಪೋಲಿಗಳಿಂದ ಮುಕ್ತವಾಗುವುದು ದುಸ್ತರ ಅಲ್ಲವೆ?*
ತೆಲಂಗಾಣದ ಮಂತ್ರಿಗಳಿಂದ ಪೆಪ್ಪರ್ ಸ್ಪ್ರೇ ತರಿಸಿ ಪ್ರಯೋಗಿಸಿ ನೋಡಿ!

ಮಹಾಲಿಂಗ ಎಂ.ಗೋರಬಾಳ, ಮಾಣಕವಾಡಿ
*ವಿಕಲಾಂಗದವರನ್ನು ದ್ವೇಷಿಸಿ, ವಿಕಾರವಿರುವ ದೇವರನ್ನು ಏಕೆ ಪೂಜಿಸುತ್ತಾರೆ?*
ವಿಕಲಾಂಗರನ್ನು ಕಣ್ಣಿನಿಂದ, ದೇವರನ್ನು ಮನಸ್ಸಿನಿಂದ ನೋಡುವುದರಿಂದ!

■ ರಾಮ್